## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮುನಿರಾಜುಗೌಡ ಪಿ.ಎಂ. ಇವರು ನಿಯಮ 72 ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾಹಿತಿ

### ಸೂಚನೆ:

ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕಿನ ಬೆಂಗಳೂರು ಇದರಲ್ಲಿ ಹೂಡಿಕೆ ಮಾಡಿದ ಸಾರ್ವಜನಿಕರು ಹಾಗೂ ಸಂಘ-ಸಂಸ್ಥೆಗಳು ಅವನತಿಯತ್ತ ಸಾಗುತ್ತಿದ್ದು ಕಳೆದ ಮೂರು ವರ್ಷಗಳಿಂದ ಯಾವುದೇ ಪ್ರಗತಿಯಾಗಿರುವುದಿಲ್ಲ. ನೇಮಕಗೊಂಡಿರುವ ಆಡಳಿತ ಅಧಿಕಾರಿಯು ಯಾಂತ್ರಿಕ ಆಡಳಿತ ನಡೆಸುತ್ತಿದ್ದು, ಸಮಸ್ಯೆ ಪರಿಹಾರಕ್ಕೆ ಯಾವುದೇ ಸಕಾರಾತ್ಮಕ ಪರಿಹಾರವನ್ನು ಕಂಡುಕೊಂಡಿರುವುದಿಲ್ಲ, ಅಲ್ಲದೇ ಅವರ ಕಾರ್ಯಶೈಲಿ ಬಗ್ಗೆ ಸರ್ಕಾರವು ಗಮನ ಹರಿಸಿರುವುದಿಲ್ಲ. ಇಲಾಖಾಧಿಕಾರಿಗಳಂತೂ ಯಾಂತ್ರಿಕವಾಗಿ ಸಭೆ ಜರುಗಿಸಿ ಜಾರಿಕೊಂಡಿರುತ್ತಾರೆ. ಸಾಲಗಾರರು ಸಾಲವನ್ನು ಮರುಪಾವತಿಸಲು ಸಿದ್ಧರಿದ್ದರೂ ಸಾಲ ಮರುಪಾವತಿಗೆ ಅವಕಾಶ ನೀಡುತ್ತಿಲ್ಲ. ಸಾಲಗಾರರು ಮಾಹಿತಿ ಅಪೇಕ್ಷಿಸಿ ಲಿಖಿತ ರೂಪದಲ್ಲಿ ಮನವಿ ಸಲ್ಲಿಸಿದ್ದರೂ ಮಾಹಿತಿ ನೀಡುವ ಸೌಜನ್ಯತೆಯನ್ನು ಆಡಳಿತ ಅಧಿಕಾರಿಗಳು ತೋರಿರುವುದಿಲ್ಲ. ಸಾಲ ವಸೂಲಾತಿಯು ಶೂನ್ಯವಾಗಿದೆ. ಕಳೆದ ಮೂರು ವರ್ಷಗಳಿಂದ ಇಲಾಖೆ **-R.B.I-** ಆಡಳಿತ ಅಧಿಕಾರಿ ನಡುವಣ ಪತ್ರ ವ್ಯವಹಾರ ಮಾತ್ರ ಪ್ರಗತಿಯಾಗಿದೆ. ತತ್ಪರಿಣಾಮವಾಗಿ ಸಾರ್ವಜನಿಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಹಕಾರ ಸಂಘ ಸಂಸ್ಥೆಗಳು ಅವಸಾನ ದತ್ತ ಮುಖಮಾಡಿವೆ. ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಸರ್ಕಾರವು ಪರಿಹಾರಾತ್ಮಕವಾಗಿ ಹಾಗೂ ಪರಿಣಾಮಕಾರಿಯಾಗಿ ಕ್ರಮ ಜರುಗಿಸುವುದು ಅಗತ್ಯವಿದ್ದು, ಓರ್ವ ದಕ್ಷ ಅಧಿಕಾರಿಯನ್ನು ನೇಮಿಸುವುದು ಔಚಿತ್ಯ ಪೂರ್ಣವಾಗಿದೆ. ಈ ವಿಷಯವಾಗಿ ಸಮಗ್ರವಾಗಿ ಚರ್ಚಿಸಲು ಸಾರ್ವಜನಿಕರು ಮತ್ತು ಸಂಘ ಸಂಸ್ಥೆಗಳ ಹಿತದೃಷ್ಟಿಯಿಂದ ಮಾನ್ಯ ಸಹಕಾರ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

### ಮಾಹಿತಿ:

ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್, ಬೆಂಗಳೂರು.

- ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್, ಬೆಂಗಳೂರು, ಈ ಬ್ಯಾಂಕ್ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿಯಲ್ಲಿ ದಿನಾಂಕ: 12-04-1999 ರಲ್ಲಿ ನೋಂದಣಿಗೊಂಡಿದೆ.
- ಬ್ಯಾಂಕಿನ ಕಾರ್ಯವ್ಯಾಪ್ತಿಯು ಬೆಂಗಳೂರು, ಬೆಂಗಳೂರು ಗ್ರಾಮಾಂತರ, ತುಮಕೂರು, ರಾಮನಗರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಸೀಮಿತವಾಗಿದೆ.

- ಬ್ಯಾಂಕಿಂಗ್ ರೆಗ್ಯೂಲೇಷನ್ ಅಧಿನಿಯಮ 1949 ರಡಿಯಲ್ಲಿ ದಿನಾಂಕ:26-08-1999 ರಂದು R.B.I ನಿಂದ ಬ್ಯಾಂಕಿಂಗ್ ಚಟುವಟಿಕೆ ಕೈಗೊಳ್ಳಲು ಪರವಾನಿಗೆ ಪಡೆದಿರುತ್ತದೆ.
- R.B.I ನವರು 2019 ರಲ್ಲಿ ಈ ಬ್ಯಾಂಕಿನ ಶಾಸನಾತ್ಮಕ ಪರಿವೀಕ್ಷಣೆ ಕೈಗೊಂಡ ಸಂದರ್ಭದಲ್ಲಿ ಬ್ಯಾಂಕಿನಲ್ಲಿ ವಂಚನೆ, ಅವ್ಯವಹಾರ, ಹಣದುರುಪಯೋಗವಾಗಿರುವುದು ಕಂಡುಬಂದಿದೆ.
- R.B.I ದಿನಾಂಕ:10-01-2020 ರಂದು ಬ್ಯಾಂಕಿಂಗ್ ರೆಗ್ಯುಲೇಷನ್ ಅಧಿನಿಯಮ 1949 ರ ಪ್ರಕರಣ 35ಎ ಅಡಿಯಲ್ಲಿ ಈ ಬ್ಯಾಂಕಿಗೆ ಬ್ಯಾಂಕಿಂಗ್ ಚಟುವಟಿಕೆಗಳನ್ನು ಕೈಗೊಳ್ಳಲು ನಿರ್ಬಂಧಿಸಿ ಆದೇಶಿಸಿರುತ್ತದೆ.
- ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 30(6) ರಡಿಯಲ್ಲಿ ಬ್ಯಾಂಕಿಗೆ ಆಡಳಿತಾಧಿಕಾರಿಯನ್ನಾಗಿ ಶ್ರೀ ಎ.ಸಿ. ದಿವಾಕರ್, ಸಹಕಾರ ಸಂಘಗಳ ಅಪರ ನಿಬಂಧಕರು ಇವರನ್ನು ನೇಮಿಸಲಾಗಿತ್ತು.
- ತದನಂತರ, ರಿಸರ್ವ್ ಬ್ಯಾಂಕಿನ ಸೂಚನೆಯಂತೆ ಹಾಗೂ ಮಾನ್ಯ ಗೌರವ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:7350/2020 ಮತ್ತು 8674/2020 ರಲ್ಲಿ ನೀಡಿರುವ **ನಿರ್ದೇಶನದಂತೆ** ಬ್ಯಾಂಕಿನ ಆಡಳಿತಾಧಿಕಾರಿಯವರಾದ ಶ್ರೀ ಎ.ಸಿ.ದಿವಾಕರ್ ರವರನ್ನು ಬದಲಿಸಿ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನುಭವವುಳ್ಳ ವಾಣಿಜ್ಯ ಬ್ಯಾಂಕಿನ ನಿವೃತ್ತ ಅಧಿಕಾರಿಯವರಾದ ಶ್ರೀ ಅಶೋಕನ್‌ರವರನ್ನು ಬ್ಯಾಂಕಿನ ಆಡಳಿತಾಧಿಕಾರಿಯಾಗಿ ನೇಮಿಸಲಾಗಿರುತ್ತದೆ. ಸದರಿಯವರು ಆಡಳಿತಾಧಿಕಾರಿಯಾಗಿ ಮುಂದುವರೆದಿರುತ್ತಾರೆ.

**ಬ್ಯಾಂಕಿನ ಅವ್ಯವಹಾರಗಳ ಬಗ್ಗೆ ತೆಗೆದುಕೊಂಡ ಕ್ರಮಗಳ ವಿವರಗಳು**

- ಸಿಐಡಿ ತನಿಖೆಗೆ ಆದೇಶಿಸಲಾಗಿದೆ.
- ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 64 ರ ವಿಚಾರಣೆಗೆ ಆದೇಶಿಸಲಾಗಿದೆ. ಪ್ರಕರಣ 64ರ ವಿಚಾರಣಾಧಿಕಾರಿಗಳು ವಿಚಾರಣೆ ಪೂರ್ಣಗೊಳಿಸಿ ದಿನಾಂಕ:08-02-2022 ರಂದು ವಿಚಾರಣಾ ವರದಿ ಸಲ್ಲಿಸಿರುತ್ತಾರೆ. ವಿಚಾರಣಾ ವರದಿಯನ್ನು ಬ್ಯಾಂಕಿಗೆ ದಿನಾಂಕ:03-03-2022ರಂದು ಕಳುಹಿಸಿದ್ದು, ದಿನಾಂಕ: 21-05-2022 ರಂದು ಬ್ಯಾಂಕ್ ಅನುಪಾಲನಾ ವರದಿ ಸಲ್ಲಿಸಿರುತ್ತಾರೆ. ದಿನಾಂಕ: 29-07-2022 ರಂದು ಪ್ರಕರಣ 68ರಡಿ ನಿರ್ದೇಶನ ಹೊರಡಿಸಲಾಗಿದೆ. ಬ್ಯಾಂಕ್ ದಿನಾಂಕ:05-12-2022 ರಂದು ಅನುಪಾಲನಾ ವರದಿ ಸಲ್ಲಿಸಿದೆ.
- 2014-15 ರಿಂದ 2018-19 ರವರೆಗಿನ ಲೆಕ್ಕಪತ್ರಗಳ ಮರು ಲೆಕ್ಕಪರಿಶೋಧನೆ ನಡೆಸಲಾಗಿದೆ.

ಪ್ರಮಾಣದಲ್ಲಿ ಸಹಕರಿಸಬೇಕು ಹಾಗೂ ಸಕಾರಾತ್ಮಕವಾಗಿ ಸ್ಪಂದಿಸಬೇಕು. ಭಾರತೀಯ ರಿಸರ್ವ್ ಬ್ಯಾಂಕ್ ಆಡಳಿತಾಧಿಕಾರಿಗೆ ತುರ್ತು ಸಂದರ್ಭದಲ್ಲಿ ಸಾಲ ವಸೂಲಾತಿ ವೆಚ್ಚ, ಸಿಬ್ಬಂದಿ ವೆಚ್ಚ ಮತ್ತು ಇತರೆ ಆಡಳಿತಾತ್ಮಕ ವೆಚ್ಚಗಳನ್ನು ಭರಿಸಲು ಮತ್ತು ಹಣಕಾಸು ಅಧಿಕಾರಗಳನ್ನು ನೀಡಬೇಕು. ಈ ದಿಸೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಸೂಚನೆ ನೀಡಲಾಗಿರುತ್ತದೆ.

- ಬ್ಯಾಂಕಿನ ಪುನಃಶ್ಚೇತನಕ್ಕೆ ಅಗತ್ಯವಿರುವ ಎಲ್ಲಾ ಕ್ರಮಕೈಗೊಳ್ಳಲು ಆಡಳಿತಾಧಿಕಾರಿಯವರಿಗೆ ಸೂಚಿಸಿ ಈ ನಿಟ್ಟಿನಲ್ಲಿ ಸಹಕಾರ ಸಂಘಗಳ ನಿಬಂಧಕರು, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್ ಪೂರ್ಣ ಪ್ರಮಾಣದಲ್ಲಿ ಸಹಕರಿಸಬೇಕು ಹಾಗೂ ಕಾಲಕಾಲಕ್ಕೆ ಪರಾಮರ್ಶಿಸಿ ವಸ್ತುಸ್ಥಿತಿ ಯನ್ನರಿತು ಬರುವ ತೊಡಕುಗಳನ್ನು ನಿವಾರಿಸಿ ಸುಗಮ ಪುನಃಶ್ಚೇತನಕ್ಕೆ ಕಾನೂನು ಕ್ರಮ ಜರುಗಿಸಲು ಸೂಚನೆ ನೀಡಲಾಗಿರುತ್ತದೆ.
- **ಬ್ಯಾಂಕಿನ ಅವ್ಯವಹಾರದಲ್ಲಿ ಭಾಗಿಯಾಗಿರುವವರ ವಿರುದ್ಧ ಈವರೆಗೆ ತೆಗೆದುಕೊಂಡಿರುವ ಕ್ರಮಗಳ ವಿವರಗಳು:**
- ಬ್ಯಾಂಕಿನಲ್ಲಿ ನಡೆದ ಬೆಳವಣಿಗೆಗಳು, ಕೈಗೊಂಡ ಕ್ರಮಗಳನ್ನು ಬ್ಯಾಂಕಿನ ಜಾಲತಾಣದಲ್ಲಿ ಹಾಗೂ ಬ್ಯಾಂಕಿನ ನಾಮಫಲಕದಲ್ಲಿ ಠೇವಣಿದಾರರ ಮಾಹಿತಿಗಾಗಿ ಪ್ರಕಟಿಸಲಾಗಿರುತ್ತದೆ.
- ಬ್ಯಾಂಕಿನ ಯಾವುದೇ ಬೆಳವಣಿಗೆಗಳಾದಲ್ಲಿ ಅಥವಾ ಯಾವುದೇ ಕ್ರಮ ಕೈಗೊಂಡಲ್ಲಿ ಅದನ್ನು ಠೇವಣಿದಾರರಿಗೆ ಕಿರು ಸಂದೇಶದ (ಎಸ್.ಎಂ.ಎಸ್) ಮೂಲಕ ಕಳುಹಿಸಲಾಗುತ್ತಿದೆ.
- ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ಬ್ಯಾಂಕಿನ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರ ವಿರುದ್ಧ ಬಸವನಗುಡಿ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:37/2020 ಅಡಿ ಪ್ರಕರಣ ದಾಖಲಾಗಿರುತ್ತದೆ ಮತ್ತು ಸಿಐಡಿ ತನಿಖೆಗೆ ಆದೇಶಿಸಲಾಗಿರುತ್ತದೆ.
- ಬ್ಯಾಂಕಿನಲ್ಲಿ ಆಡಳಿತ ಮಂಡಳಿಯ ಸದಸ್ಯರು ಮತ್ತು ಸಾಲ ಪಡೆದು ಮರುಪಾವತಿ ಮಾಡದೇ ಇರುವ ಸಾಲಗಾರರು ಮತ್ತು ಬ್ಯಾಂಕಿನ ಅಧಿಕಾರಿ, ಸಿಬ್ಬಂದಿಗಳನ್ನು ಒಳಗೊಂಡಂತೆ ಒಟ್ಟು 42 ಜನ ಆರೋಪಿಗಳನ್ನು ದಸ್ತಗಿರಿ ಜರುಗಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿರುತ್ತದೆ.
- ಆರೋಪಿತರು ಮತ್ತು ಅವರ ಅವಲಂಬಿತ ಸದಸ್ಯರ ಹೆಸರಿನಲ್ಲಿದ್ದ ಒಟ್ಟು 9548 ವಿವಿಧ ಬ್ಯಾಂಕ್ ಖಾತೆಗಳಲ್ಲಿದ್ದ ರೂ.15.00 ಕೋಟಿಗೂ ಹೆಚ್ಚು ಹಣವನ್ನು ಫ್ರೀಜ್ ಮಾಡಲಾಗಿರುತ್ತದೆ. ತನಿಖೆಯಲ್ಲಿ ಆರೋಪಿತರು ಹಾಗೂ ಅವರ ಸಂಬಂಧಿಕರ ಹೆಸರಿನಲ್ಲಿದ್ದ ಸುಮಾರು ರೂ.1,115.00 ಕೋಟಿಗಿಂತ ಹೆಚ್ಚಿಗೆ ಬೆಲೆ ಬಾಳುವ ಸ್ಥಿರಾಸ್ತಿಗಳನ್ನು ಗುರುತಿಸಿ ಪ್ರಿವೆನ್ಷನ್ ಆಫ್ ಮನಿಲ್ಯಾಂಡರಿಂಗ್ ಆಕ್ಟ್ ಅಡಿಯಲ್ಲಿ ಕ್ರಮ ಜರುಗಿಸಲು ಜಾರಿ ನಿರ್ದೇಶನಾಲಯಕ್ಕೆ ವರದಿ ಸಲ್ಲಿಸಲಾಗಿರುತ್ತದೆ.

- ಜಾರಿ ನಿರ್ದೇಶನಾಲಯ ಸ್ಥಿರಾಸ್ತಿಯನ್ನು ಮುಟ್ಟುಗೋಲು ಹಾಕಿರುತ್ತದೆ.
- ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗಿದೆ. ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗಿದೆ.
- ದಿನಾಂಕ:09-02-2022 ಮತ್ತು ದಿನಾಂಕ:17-08-2022 ರಂದು ನನ್ನ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಆಡಳಿತಾಧಿಕಾರಿಗಳಿಗೆ, ಸಿಐಡಿ ಮತ್ತು ಇಲಾಖೆಗೆ ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿರುತ್ತದೆ.
- ಆಡಳಿತಾಧಿಕಾರಿ ನೇಮಕಾತಿ ದಿನಾಂಕದಿಂದ ಇದುವರೆವಿಗೂ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಬ್ಯಾಂಕಿನ ನಾಮಫಲಕದಲ್ಲಿ ಪ್ರಕಟಿಸುವುದು ಹಾಗೂ ಪತ್ರಿಕಾ ಪ್ರಕಟಣೆ ನೀಡುವುದು.
- ಪ್ರತಿ ಠೇವಣಿದಾರರಿಗೆ/ಸದಸ್ಯರಿಗೆ ಬ್ಯಾಂಕಿನ ಸ್ಥಿತಿಗತಿಗಳ ಬಗ್ಗೆ ಕಾಲಕಾಲಕ್ಕೆ ಕಿರು ಸಂದೇಶ (sms) ಕಳುಹಿಸುವುದು.
- ಹಣದುರುಪಯೋಗ, ವಂಚನೆ ಎಸಗಿರುವ ಸಂಬಂಧಿಸಿದ ಎಲ್ಲಾ ತಪ್ಪಿತಸ್ಥರ ವಿರುದ್ಧ ಪರಿಣಾಮಕಾರಿ ಕಠಿಣ ಕಾನೂನು ಕ್ರಮ ಜರುಗಿಸುವುದು.
- 24 ಮುಖ್ಯ ಫಲಾನುಭವಿಗಳಿಗೆ ರೂ.892.85 ಕೋಟಿ ಸಾಲ ನೀಡಿ ಹಣದುರುಪಯೋಗವಾಗಲು ಕಾರಣ ಕರ್ತರಾದವರನ್ನು ಗುರುತಿಸಿ ಅವರ ಚರ ಮತ್ತು ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು, ಜೊತೆಗೆ ಅವರು ಎಸಗಿರುವ ಕೃತ್ಯದ ಬಗ್ಗೆ ಪತ್ರಿಕಾ ಪ್ರಕಟಣೆ ನೀಡತಕ್ಕದ್ದು.
- ಡಿಐಸಿಜಿಸಿಯೊಂದಿಗೆ ಸಮನ್ವಯ ಸಾಧಿಸಿ ಬರಬೇಕಾದ ವಿಮಾ ಮೊತ್ತವನ್ನು ಸಂಬಂಧಿಸಿದವರಿಗೆ ಪಾವತಿಸಲು ಕ್ರಮಕೈಗೊಳ್ಳುವುದು.
- ಬ್ಯಾಂಕಿನ ವಾಸ್ತವಿಕ ಆರ್ಥಿಕ ಸ್ಥಿತಿಗತಿಗಳನ್ನು ಮರೆಮಾಚಿ, ಕಾನೂನು ನಿಯಮಗಳಿಗನುಗುಣವಾಗಿ ಲೆಕ್ಕಪರಿಶೋಧನೆ ಕೈಗೊಳ್ಳದೇ ಗಂಭೀರವಾದ ಲೋಪಕ್ಕೆ ಕಾರಣರಾದ ಲೆಕ್ಕಪರಿಶೋಧಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದು ಮತ್ತು ಸನ್ನದು ಲೆಕ್ಕಿಗರಾಗಿ ಮುಂದುವರೆಯದಂತೆ ಸಂಬಂಧಿಸಿದ ಪ್ರಾಧಿಕಾರಕ್ಕೆ ಪ್ರಸ್ತಾವೆ ಸಲ್ಲಿಸಲು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಸೂಚಿಸಲಾಗಿರುತ್ತದೆ.
- ಬ್ಯಾಂಕಿನ ಆಡಳಿತ ಮಂಡಳಿಯ ಸ್ಥಾನದಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 30(6) ಅಡಿಯಲ್ಲಿ ನೇಮಕಗೊಂಡಿರುವ ಆಡಳಿತಾಧಿಕಾರಿಯು ಆಡಳಿತ ಮಂಡಳಿಯು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತಾರೆ. ಬ್ಯಾಂಕಿನ ಸುಧಾರಣೆಗೆ ಹಾಗೂ ಲೋಪದೋಷಕ್ಕೆ ಕಾರಣಕರ್ತರಾದವರ ವಿರುದ್ಧ ಕ್ರಮ ಜರುಗಿಸಲು ಶುಲ್ಕ ಪಾವತಿ ಸೇರಿದಂತೆ ಖರ್ಚು-ವೆಚ್ಚಗಳನ್ನು ಮಾಡಲು ಆಡಳಿತಾಧಿಕಾರಿಯವರಿಗೆ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಬಂಧ ವಿಧಿಸುವುದು ಸಮಂಜಸವಲ್ಲ. ಈ ಬ್ಯಾಂಕ್ ಬಹುತೇಕ ರೋಗಗ್ರಸ್ಥವಾಗಿದ್ದು, ಈ ಅವಸ್ಥೆಯಿಂದ ಹೊರ ಬರುವಂತೆ ಮಾಡಲು ಭಾರತೀಯ ರಿಸರ್ವ್ ಬ್ಯಾಂಕ್ ಪೂರ್ಣ

- ಬ್ಯಾಂಕಿನಲ್ಲಿ ನಡೆದ ಅವ್ಯವಹಾರಗಳಲ್ಲಿ ಭಾಗಿಯಾಗಿದ್ದ 19 ಸಿಬ್ಬಂದಿಗಳಿಗೆ ಬ್ಯಾಂಕಿನ ಸೇವಾ ನಿಯಮದಡಿಯಲ್ಲಿ ಆರೋಪ ಪಟ್ಟಿಯನ್ನು ನೀಡಲಾಗಿತ್ತು. ಈ ಎಲ್ಲಾ ಪ್ರಕರಣಗಳು ಮುಕ್ತಾಯಗೊಂಡಿದ್ದು, ಶಿಸ್ತು ಕ್ರಮವನ್ನು ಜರುಗಿಸಿ 19 ಸಿಬ್ಬಂದಿಗಳನ್ನು ವಜಾಗೊಳಿಸಲಾಗಿದೆ. ಸದರಿ 19 ಸಿಬ್ಬಂದಿಗಳಲ್ಲಿ 12 ಸಿಬ್ಬಂದಿಗಳು ಸಹಕಾರ ಸಂಘಗಳ ನಿಬಂಧಕರ ಪ್ರಾಧಿಕಾರದ ಮುಂದೆ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70ರ ಅಡಿಯಲ್ಲಿ ಮೊಕದ್ದಮೆಯನ್ನು ಹೂಡಿರುತ್ತಾರೆ.
- ಬ್ಯಾಂಕಿನಲ್ಲಿ ನಡೆದ ಅವ್ಯವಹಾರಗಳ ತನಿಖೆಯಡಿಯಲ್ಲಿ ಬಂಧನಕ್ಕೊಳಗಾದ ಬ್ಯಾಂಕಿನ ಸಿಬ್ಬಂದಿಗಳ ಪಟ್ಟಿಯನ್ನು ಸಿ.ಐ.ಡಿ ತನಿಖಾ ಸಂಸ್ಥೆಯವರು ದಿನಾಂಕ:24-05-2022 ರಂದು ಬ್ಯಾಂಕಿಗೆ ಒದಗಿಸಿರುತ್ತಾರೆ. ಬ್ಯಾಂಕಿನ ಸೇವಾ ನಿಯಮ 8.5 ರಂತೆ ಬಂಧನಕ್ಕೊಳಗಾದ ಬ್ಯಾಂಕಿನ 10 ಸಿಬ್ಬಂದಿಗಳನ್ನು ಸದರಿಯವರ ಬಂಧನದ ದಿನಗಳಿಂದ ಅನ್ವಯವಾಗುವಂತೆ ಕರ್ತವ್ಯದಿಂದ ವಜಾಗೊಳಿಸಲಾಗಿದೆ.
- 24 ಪ್ರಮುಖ ಸಾಲದ ಫಲಾನುಭವಿಗಳಲ್ಲಿ ಹೆಚ್ಚು ಸಾಲವನ್ನು ಪಡೆದ ಮೊದಲ 14 ಸಾಲಗಾರರ ಮಾಹಿತಿ ಹಾಗೂ ಲಭ್ಯವಿರುವ ದಾಖಲೆಗಳೊಂದಿಗೆ ತನಿಖಾ ವರದಿಯನ್ನು ಸಿ.ಐ.ಡಿ ಮತ್ತು ಇ.ಡಿ ಗೆ ಕಳುಹಿಸಲಾಗಿರುತ್ತದೆ.
- ದಿನಾಂಕ:09-02-2022 ಮತ್ತು ದಿನಾಂಕ:17-08-2022 ರಂದು ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಬ್ಯಾಂಕಿನಲ್ಲಿ ಅವ್ಯವಹಾರ ನಡೆಸಿರುವವರ ವಿರುದ್ಧ ಕಠಿಣ ಕ್ರಮ ಜರುಗಿಸಲು ಸಾಲ ವಸೂಲಾತಿಗೆ ಆದ್ಯತೆ ನೀಡಲು ಆಡಳಿತಾಧಿಕಾರಿಗಳು, ಸಿಐಡಿ ಮತ್ತು ಇಲಾಖೆಗೆ ಸೂಚಿಸಲಾಗಿದೆ.
- **ಠೇವಣಿದಾರರ ವಿವರಗಳು: –**
- ದಿನಾಂಕ:10-01-2020 ರಂದು ಬ್ಯಾಂಕು 41,778 ಠೇವಣಾತಿದಾರರಿಗೆ ರೂ.2402.17 ಕೋಟಿ ಪಾವತಿಸ್ಬಬೇಕಾಗಿತ್ತು. ಈ ಪೈಕಿ ಬ್ಯಾಂಕಿನ ಸ್ವಂತ ನಿಧಿಯಿಂದ 42,597 ಠೇವಣಾತಿದಾರರಿಗೆ (ರೂ.1.00 ಲಕ್ಷ ಜೊತೆಗೆ ವೈದ್ಯಕೀಯ ವೆಚ್ಚ) ರೂ.233.49 ಕೋಟಿ ಮೊತ್ತವನ್ನು ಪಾವತಿಸಿರುತ್ತದೆ.
- ಅದೇ ರೀತಿ ಡಿಐಸಿಜಿಸಿ ವಿಮಾ ಸಂಸ್ಥೆಯು ನೀಡಿದ ಮೊತ್ತದ ಪೈಕಿ 22.244 ಕ್ಲೈಂಗಳಿಗೆ ರೂ.712.35 ಕೋಟಿ ಪಾವತಿಸಿರುತ್ತದೆ. ಒಟ್ಟಾರೆ 41,778 ಠೇವಣಿದಾರರ ಪೈಕಿ 32,010 ಠೇವಣಾತಿದಾರರಿಗೆ ರೂ.332.39 ಕೋಟಿಯನ್ನು ಪಾವತಿಸಲಾಗಿದ್ದು (ದಿನಾಂಕ:10-01-2020 ರಲ್ಲಿದ್ದಂತೆ ರೂ.6.00 ಲಕ್ಷದವರೆಗಿನ ಮೊತ್ತದ ಠೇವಣಾತಿ ಹೊಂದಿದ್ದ ಎಲ್ಲಾ ಠೇವಣಾತಿದಾರರಿಗೆ ಪೂರ್ಣ ಠೇವಣಾತಿ ಹಣವನ್ನು ಪಾವತಿಸಲಾಗಿದೆ) ಒಟ್ಟು ಠೇವಣಾತಿದಾರರ ಶೇ.78.62 ಠೇವಣಾತಿದಾರರಿಗೆ ಪೂರ್ಣ ಮೊತ್ತವನ್ನು ಪಾವತಿಸಲಾಗಿದೆ.

- ಈ ಬ್ಯಾಂಕಿನಲ್ಲಿ ಹೆಚ್ಚಿನ ಸಾಲ ಪಡೆದುಕೊಂಡು ವಿದೇಶದಲ್ಲಿ ತಲೆಮರೆಸಿಕೊಂಡಿರುವ ಜಶ್ವಂತ ರೆಡ್ಡಿ ಮತ್ತು ರಂಜಿತ್ ರೆಡ್ಡಿರವರ ವಿರುದ್ಧ ರೆಡ್ ಕಾರ್ನರ್ ಹೊರಡಿಸುವಂತೆ ಸಿಐಡಿಯವರು ಸಿಬಿಐ ಗೆ ಕೋರಿರುತ್ತಾರೆ.
- ಬ್ಯಾಂಕಿನಲ್ಲಿ ಏಪ್ರಿಲ್ 2009 ನೇ ಸಾಲಿನಿಂದ ಜನವರಿ 2020ರ ಸಾಲಿನ ವರೆಗೆ ನಡೆದಿರುವ ಹಣಕಾಸಿನ ಅವ್ಯವಹಾರದ ಬಗ್ಗೆ ಮತ್ತು ಸುಳ್ಳು ಲಾಭ ನಷ್ಟದ ತಃಖ್ತೆಯ ಕುರಿತು ಮ.ಕೆನ್ & ಕಂಪನಿರವರು ಫಾರೆನ್ಸಿಕ್ ಆಡಿಟ್ ನಡೆಸುತ್ತಿದ್ದು, ಹಾಲಿ 2009-10ನೇ ಸಾಲಿನ ಹಣಕಾಸಿನ ಅವ್ಯವಹಾರದ ಬಗ್ಗೆ ಆಡಿಟ್ ವರದಿಯನ್ನು ಸಲ್ಲಿಸಿದ್ದರ ಮೇರೆಗೆ ದಿನಾಂಕ:12-08-2021 ರಂದು ಮಾನ್ಯ 1ನೇ ಎ.ಸಿ.ಎಂ.ಎಂ. ನ್ಯಾಯಾಲಯ ಬೆಂಗಳೂರು ನಗರ 2009-10 ನೇ ಸಾಲಿನಲ್ಲಿ ನಡೆದಿರುವ ಹಣಕಾಸಿನ ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ಒಟ್ಟು 28 ಜನ ಆರೋಪಿಗಳ ವಿರುದ್ಧ ಪ್ರಾಥಮಿಕ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ. ಈ ದೋಷಾರೋಪಣಾ ಪಟ್ಟಿಯನ್ನು ಸಿ.ಸಿ. ನಂಬರ್:28892/2021 ರಲ್ಲಿ ಅಂಗೀಕರಿಸಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುತ್ತದೆ.
- ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಪ್ರಕರಣ 64 ರ ವಿಚಾರಣೆಗೆ ಆದೇಶಿಸಲಾಗಿದೆ. ವಿಚಾರಣೆಯಲ್ಲಿ ಒಟ್ಟು 20 ಆರೋಪಗಳ ಬಗ್ಗೆ ವಿಚಾರಣೆ ನಡೆಸಲಾಗಿದೆ. ಪ್ರಕರಣ 64ರ ವಿಚಾರಣಾಧಿಕಾರಿಗಳು ವಿಚಾರಣೆ ಪೂರ್ಣಗೊಳಿಸಿ ದಿನಾಂಕ:08-02-2022 ರಂದು ವಿಚಾರಣಾ ವರದಿ ಸಲ್ಲಿಸಿರುತ್ತಾರೆ. ವಿಚಾರಣಾ ವರದಿಯನ್ನು ಬ್ಯಾಂಕಿಗೆ ದಿನಾಂಕ:03-03-2022 ರಂದು ಕಳುಹಿಸಿದ್ದು, ದಿನಾಂಕ: 21-05-2022 ರಂದು ಬ್ಯಾಂಕ್ ಅನುಪಾಲನಾ ವರದಿ ಸಲ್ಲಿಸಿರುತ್ತದೆ. ದಿನಾಂಕ:29-07-2022 ರಂದು ಪ್ರಕರಣ 68 ರಡಿ ನಿರ್ದೇಶನ ಹೊರಡಿಸಲಾಗಿದೆ. ಬ್ಯಾಂಕ್ ದಿನಾಂಕ:05-12-2022 ರಂದು ಅನುಪಾಲನಾ ವರದಿ ಸಲ್ಲಿಸಿದೆ.
- ಬ್ಯಾಂಕಿನ ಅವ್ಯವಹಾರದಲ್ಲಿ ಭಾಗಿಯಾಗಿದ್ದ, ಬ್ಯಾಂಕಿನ ಸಿಬ್ಬಂದಿ, ನಿರ್ದೇಶಕರು ಹಾಗೂ ಇತರ ಗ್ರಾಹಕರ ವಿರುದ್ಧ ಸಿ.ಐ.ಡಿ ಸಂಸ್ಥೆಯಲ್ಲಿ ಎಫ್.ಐ.ಆರ್ ಸಂಖ್ಯೆ 37/2020 ಹಾಗೂ ಈ.ಡಿ ಸಂಸ್ಥೆಯಲ್ಲಿ ECIR/BGZO/09/2020 ರಲ್ಲಿ ದೂರನ್ನು ದಾಖಲಿಸಲಾಗಿದೆ.
- ಶ್ರೀ ರಾಮಕೃಷ್ಣ ಕೆ, ಮಾಜಿ ಅಧ್ಯಕ್ಷರು, ಶ್ರೀ ಜಿ ಕೃಷ್ಣನ್, ಮಾಜಿ ನಿರ್ದೇಶಕರು ಹಾಗೂ ಅವರ ಸಂಬಂಧಿಕರು, ಶ್ರೀ ಸಂತೋಷ್ ಕುಮಾರ ಎ, ಮಾಜಿ ಕಾರ್ಯನಿರ್ವಹಣಾಧಿಕಾರಿ ಮತ್ತು ಅವರ ಸಹಚರರಾದ ಶ್ರೀ ಸುಧೀರ್ ಬಾಬು ಟಿ, ಶ್ರೀ ಚೇತನ್ ಕುಮಾರ ಮತ್ತು ಶ್ರೀ ರಾಮಣ್ಣ ಈ., ರವರ ವಂಚನೆಯ ಮಾಹಿತಿ ಹಾಗೂ ವರದಿಗಳನ್ನು ಸಿ.ಐ.ಡಿ ಮತ್ತು ಇ.ಡಿ ಸಂಸ್ಥೆಗೆ ನೀಡಲಾಗಿದೆ. ಸಿಐಡಿ ಸಂಸ್ಥೆಯಿಂದ ಬ್ಯಾಂಕಿನ ಅಧ್ಯಕ್ಷರು ಹಾಗೂ ನಿರ್ದೇಶಕರುಗಳನ್ನು ಬಂಧಿಸಿ ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ತಿಳಿದುಬಂದಿದೆ.

- ದಿನಾಂಕ:30-09-2022 ರಂತೆ 38,474 ಠೇವಣಾತಿದಾರರು ಉಳಿದಿದ್ದು (ಡಿಐಸಿಜಿಸಿ ಕ್ಲೈಂ ಪಾವತಿ ಮಾಡಿರುವವರ ಯಾವುದೇ ಉಳಿತಾಯ/ಚಾಲ್ತಿ ಖಾತೆಯನ್ನು ಮುಕ್ತಾಯಗೊಳಿಸಿರುವುದಿಲ್ಲ) ಅದರ ಒಟ್ಟು ಮೊತ್ತ ರೂ.1846.89 ಕೋಟಿ ಆಗಿರುತ್ತದೆ.

- **ಸಾಲಗಳ್ಳ ವಸೂಲಾತಿ:** ಬ್ಯಾಂಕಿನಿಂದ ನೀಡಿರುವ ಸಾಲಗಳ ವಸೂಲಾತಿ ಕಾರ್ಯವು ಪ್ರಗತಿಯಲ್ಲಿದ್ದು, ದಿನಾಂಕ: 10-01-2020 ರಿಂದ (ಕಾಯ್ದೆ ಕಲಂ 35ಎ ವಿಧಿಸಿದ ದಿನಾಂಕ) ಈವರೆವಿಗೆ ಒಟ್ಟು ರೂ. 192.67 ಕೋಟಿ (ನಕಲಿ ಸಾಲಗಳ ಮುಕ್ತಾಯಗಳು ಸೇರಿದಂತೆ) ಸಾಲ ವಸೂಲಾತಿಯಾಗಿರುತ್ತದೆ.

- ಅಡಮಾನ ಸಾಲ ಹಾಗೂ ಮನೆಯ ಮೇಲಿನ ಭದ್ರತಾ ಸಾಲವನ್ನು ಪಡೆದು ಸುಸ್ತಿಯಾಗಿರುವ ಸಾಲಗಾರರಿಗೆ ನೋಟೀಸ್ ನೀಡಲಾಗಿ ನಂತರ ಸರ್ಫೇಸಿ ನೋಟೀಸ್ ಜಾರಿಗೊಳಿಸಲಾಗುತ್ತಿದೆ. ನಂತರ ಮುಂದಿನ ವಸೂಲಾತಿ ಕ್ರಮ ಕೈಗೊಳ್ಳಲಾಗುವುದು.

- **ಇ.ಡಿ ಸಂಸ್ಥೆಗೆ ದೂರು:** ಬ್ಯಾಂಕಿನಲ್ಲಿ ಸಾಲದ ಖಾತೆಗಳನ್ನು ಪರಿಶೀಲಿಸಿದಾಗ, ದಿನಾಂಕ:31-03-2021 ರಂತೆ ರೂ.1,408.05 ಕೋಟಿ ಸಾಲಗಳ ಪೈಕಿ ರೂ.1,210.25 ಕೋಟಿಗಳ ನಕಲಿ ಸಾಲದ ಖಾತೆಗಳು ಕಂಡು ಬಂದಿದ್ದು, ಉಳಿದ ರೂ.197.80 ಕೋಟಿಗಳ ಖಾತೆಗಳಲ್ಲಿ ಇತರೆ ಅವ್ಯವಹಾರ ಕಂಡು ಬಂದಿರುತ್ತದೆ, ವಂಚನೆಯ ವಹಿವಾಟುಗಳನ್ನೊಳಗೊಂಡಿರುವ ಖಾತೆಗಳು 86% ರಷ್ಟಿದ್ದು ಅಂತಹ ಖಾತೆಗಳ ಸಾಲ ವಸೂಲಾತಿಗಾಗಿ ವಿವರಗಳನ್ನು ತನಿಖಾ ವರದಿಯೊಂದಿಗೆ ಇ.ಡಿ ಹಾಗೂ ಸಿ.ಐ.ಡಿ ಸಂಸ್ಥೆಗೆ ಸಲ್ಲಿಸುತ್ತಿದ್ದೇವೆ. ಪ್ರಮುಖ ಸುಸ್ತಿದಾರರಲ್ಲಿ ಹೆಚ್ಚು ಸಾಲವನ್ನು ಪಡೆದ 14 ಸಾಲಗಾರರ (ಒಟ್ಟು ರೂ.2282.08 ಕೋಟಿ) ಮಾಹಿತಿ ಹಾಗೂ ಲಭ್ಯವಿರುವ ದಾಖಲೆಗಳೊಂದಿಗೆ ತನಿಖಾ ವರದಿಯನ್ನು ಸಿ.ಐ.ಡಿ ಮತ್ತು ಇ.ಡಿ ಗೆ ಕಳುಹಿಸಿಕೊಡಲಾಗಿದೆ.

- **ಬ್ಯಾಂಕಿನ ಪುನಶ್ಚೇತನ:** ಬ್ಯಾಂಕಿನ ಪುನಶ್ಚೇತನಕ್ಕೆ ಹಲವಾರು ಹೂಡಿಕೆದಾರರು, ಆರ್ಥಿಕ/ಬಂಡವಾಳ ಸಲಹೆಗಾರರು, ಸಣ್ಣ ಹಣಕಾಸು ಬ್ಯಾಂಕ್‌ನ ಅರ್ಜಿದಾರರು, ಕಿರು ಬಂಡವಾಳ ಸಂಸ್ಥೆಗಳನ್ನು ಸಂಪರ್ಕಿಸಲಾಗಿ, ಉತ್ತಮ ಪ್ರತಿಕ್ರಿಯೆ ದೊರೆತಿದ್ದು ಬಹಿರಂಗಪಡಿಸದ ಒಪ್ಪಂದ (ಎನ್.ಡಿ.ಎ) ಸಹಿ ಮಾಡಿ ಪರಿಶೀಲನೆ ಪ್ರಕ್ರಿಯೆಯನ್ನು ಹೂಡಿಕೆದಾರರು ಪ್ರಾರಂಭಿಸಿದ್ದಾರೆ. ಕರಡು ಆಸಕ್ತಿಯ ಅಭಿವ್ಯಕ್ತಿ ಕೋರುವ ಸೂಚನೆಯನ್ನು (Expression of Interest) ದಿನಾಂಕ: 20-01-2022 ರಂದು R B I ಗೆ ಕಳುಹಿಸಲಾಗಿದೆ.

- **ಸರ್ವ ಸದಸ್ಯರ ಮಹಾಸಭೆ :** 2019-20ರ ಆರ್ಥಿಕ ವರ್ಷದ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ 01-05-2022 ರಂದು ನಡೆಸಲಾಗಿದೆ. 2019-20ರ ಲೆಕ್ಕಪತ್ರಗಳು, 2014-15 ರಿಂದ

2016-17 ರವರೆಗಿನ ಮರು ಲೆಕ್ಕಪರಿಶೋಧನಾ ವರದಿ, ಬ್ಯಾಂಕಿನ ಪುನಶ್ಚೇತನಕ್ಕೆ ಆಸಕ್ತಿಯುಳ್ಳವರನ್ನು ಗುರುತಿಸಲು ಆಸಕ್ತಿಯ ಅಭಿವ್ಯಕ್ತಿ ಕೋರುವ ಸೂಚನೆ (Expression of Interest) ಪ್ರಕಟಿಸುವ ಕುರಿತು ಸಭೆ ಸರ್ವಾನುಮತದಿಂದ ಅಂಗೀಕರಿಸಿದೆ.

- **ಮರು ಲೆಕ್ಕಪರಿಶೋಧನೆ** : ಅಕ್ಟೋಬರ್-2019ರ R B I ಪರಿವೀಕ್ಷಣೆಯ ಸಮಯದಲ್ಲಿ ವಂಚನೆಯ ಹಾಗೂ ಅಕ್ರಮ ವಹಿವಾಟುಗಳು ಕಂಡು ಬಂದ ಕಾರಣ, ಕರ್ನಾಟಕ ಸರ್ಕಾರದ ಲೆಕ್ಕಪರಿಶೋಧನಾ ಇಲಾಖೆಯ ನಿರ್ದೇಶಕರು ಜುಲೈ-2020ರಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959 ರಡಿಯಲ್ಲಿ 2014-15 ರಿಂದ 2018-19ರ ಸಾಲುಗಳ ಮರುಲೆಕ್ಕಪರಿಶೋಧನೆಗೆ ಆದೇಶಿಸಿರುತ್ತಾರೆ. 2014-15 ರಿಂದ 2018-19ರ 5 ವರ್ಷಗಳ ಮರು ಲೆಕ್ಕಪರಿಶೋಧನಾ ಕಾರ್ಯವು ಮುಕ್ತಾಯಗೊಂಡಿದ್ದು, ಸದರಿ ಸಾಲುಗಳ ಲೆಕ್ಕಪತ್ರಗಳ ಪುನರ್ ಪರಿಶೀಲನೆಯ ನಂತರ ಮರು ಲೆಕ್ಕಪರಿಶೋಧನೆಯ ಪರಿಷ್ಕೃತ ವರದಿಯಂತೆ ರೂ.1294 ಕೋಟಿಗಳ ನಷ್ಟ ಹಾಗೂ ರೂ.811 ಕೋಟಿಗಳ ಅವಕಾಶವನ್ನು ಕಲ್ಪಿಸಲಾಗಿದ್ದು, ಬ್ಯಾಂಕಿನ 2020-21ರ ಶಾಸನಬದ್ಧ ಲೆಕ್ಕಪರಿಶೋಧನೆಯ ವರದಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.
- 2020-21ರ ಶಾಸನಬದ್ಧ ಲೆಕ್ಕಪರಿಶೋಧನೆ :ಮೆ॥ ಗುರು&ಜನಾ, ಲೆಕ್ಕಪರಿಶೋಧಕರು 2020-21ರ ಆರ್ಥಿಕ ವರ್ಷದ ಶಾಸನಬದ್ಧ ಲೆಕ್ಕಪರಿಶೋಧನೆಯನ್ನು ನಡೆಸಿದ್ದು, ವರದಿಯನ್ನು ದಿನಾಂಕ 26-08-2022 ರಂದು ಸಲ್ಲಿಸಿರುತ್ತಾರೆ.
- RBI ನ ಪರಿವೀಕ್ಷಣೆ: 2019-2021 ನೇ ಸಾಲುಗಳ RBI ನ ಪರಿವೀಕ್ಷಣೆಯು ದಿನಾಂಕ 05-09-2022 ರಂದು ಪ್ರಾರಂಭಗೊಂಡು 21-09-2022 ರಂದು ಮುಕ್ತಾಯಗೊಂಡಿದ್ದು ಪರಿವೀಕ್ಷಣೆಯ ವರದಿ ಬಂದಿರುತ್ತದೆ.
- ಬ್ಯಾಂಕಿನ ಪುನಶ್ಚೇತನ ಕುರಿತು ಹೂಡಿಕೆದಾರರನ್ನು ಹುಡುಕುವ ಕಾರ್ಯವು ಚಾಲ್ತಿಯಲ್ಲಿರುತ್ತದೆ. ಬ್ಯಾಂಕಿನ ಪುನಶ್ಚೇತನ ಕುರಿತು ಕೆಲವು ಹೂಡಿಕೆದಾರರು ಆಸಕ್ತಿ ತೋರುತ್ತಿದ್ದು, ಆರ್. ಬಿ. ಐ. ನಿಂದ ಅನುಮತಿ ಬಂದ ನಂತರ ಈ ಕುರಿತು ಮುಂದಿನ ಕ್ರಮ ವಿಡಲಾಗುವುದು.

**ಸಂಖ್ಯೆ: ಸಿಒ 118 ಸಿಆರ್ ಸಿ 2022**

(ಎಸ್.ಟಿ.ಸೋಮಶೇಖರ್)

ಸಹಕಾರ ಇಲಾಖೆ